**ದಿ: 25-10-2024..ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು: 2ನೇ ಪ್ರತಿವಾದಿ ಪರ ಶ್ರೀ ವಾಯ್.ಪಿ.ಕೆ. ವಕೀಲರಿಂದ:**

ವೆಂಕಟಗಿರಿ ಇವರಿಗೆ **3** ಜನ ಸಹೋದರರು ಅವರ ಹೆಸರು ವೆಂಕಟಗಿರಿ, ಶಿವರಾಯ ಮತ್ತು ಮಾನಶೇಯ್ಯ. ಇವರು ಬೇರೆ ಬೇರೆ ಯಾದ ಮೇಲೆ ಅವರ ಭಾಗಕ್ಕೆ ಆಸ್ತಿ ಬಂದಿದೆ ಎಂದರೆ ಸರಿ. **1**ನೇ ಪ್ರತಿವಾದಿಯ ತಂದೆ ವೆಂಕಟಗಿರಿ ಜೀವಂತ ಇದ್ದಾಗ ಆತನ ಹೆಸರಿಗೆ ದಾವಾ ಆಸ್ತಿ ಇತ್ತು ಮತ್ತು ಆತನೆ ಕಬ್ಜಾದಾರನು ಆಗಿದ್ದನು ಎಂದರೆ ಸರಿ. ವೆಂಕಟಗಿರಿ ಸತ್ತ ಮೇಲೆ ದಾವಾ ಆಸ್ತಿ **1**ನೇ ಪ್ರತಿವಾದಿಯ ಕುಟುಂಬಕ್ಕೆ ಸಂಬಂಧಪಟ್ಟಿದ್ದು ಎಂದರೆ ಸಾಕ್ಷಿಯು ನಮಗೆ ಸಂಬಂಧಪಟ್ಟಿದ್ದು ಎನ್ನುತ್ತಾರೆ. ಯಂಕಮ್ಮನ ಹೆಸರಿನಲ್ಲಿ ಪಹಣಿ ಮತ್ತು ಪಟ್ಟಾವರ್ಗಾವಣೆಯಾಗಿ ಅವರ ಕಬ್ಜಾದಲ್ಲಿತ್ತು ಎಂದರೆ ಸರಿ. ಯಂಕಮ್ಮ **2**ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾಳೆ ಎಂದರೆ ಸರಿ. ಯಂಕಮ್ಮಳಿಗೆ ದಾವಾ ಆಸ್ತಿ ಮಾರಾಟ ಮಾಡಲು ಹಕ್ಕು ಇದೆ ಎಂದರೆ ಆಕೆ ಮಾರಾಟ ಮಾಡಿದ್ದಾಳೆ ಎನ್ನುತ್ತಾರೆ. ನೀವು ಸುಳ್ಳು ಪ್ರಮಾಣ ಪತ್ತ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

ಸಹಿ/-

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ